

ತನ್ನ ಸಂಸಾರದ ನಿತ್ಯ ವ್ಯಾಪಾರಗಳೊಳಗೆ ಊರಿನ ಕೆಲ ಕುರುಹುಗಳು ಜೀವಂತವಾಗಿವೆ ಎಂಬುದು ಅನಂತುವಿಗೆ ಗೊತ್ತು. ಯಾವ ಊರಿಗೆ ಹೋದರೂ ಮತ್ತು ಇರುವ ಮನೆ ಎಷ್ಟೇ ಚಿಕ್ಕದಿದ್ದರೂ ಹಿತ್ತಿಲಲ್ಲೋ, ಬಾಲ್ಕನಿಯ ಇರುಕಿನಲ್ಲೋ ಅವನ ಅಪ್ಪ ಹಳೆಯ ಬಕೇಟುಗಳಲ್ಲಿ ಮಣ್ಣು ತುಂಬಿಸಿ ಕೆಸುವಿನ ಗೆಡ್ಡೆಗಳನ್ನು ಬಿತ್ತುತ್ತಿದ್ದ, ಅವುಗಳಿಂದ ಚಿಗುರುವ ಗಿಣಿಹಸಿರಿನ ಕೆಸುವಿನೆಲೆಗಳನ್ನು ಅಮ್ಮ ಗಂಟುಕಟ್ಟಿ ಖಾರಖಾರವಾದ ಪಲ್ಯ ಮಾಡುತ್ತಿದ್ದಳು, ಅದರ ದಂಟಿನ ಹುಳಿ ಮಾಡುತ್ತಿದ್ದಳು. ಸ್ವಲ್ಪವೇ ಇರುತ್ತಿದ್ದ ಆ ಪಲ್ಯ ಹುಳಿಗಳನ್ನು ಒಂದಿಡೀ ವಾರಕ್ಕಾಗುವಂತೆ ಸ್ವಲ್ಪಸ್ವಲ್ಪವೇ ಬಡಿಸಿಕೊಳ್ಳುತ್ತಿದ್ದ ತನ್ನ ಮನೆಯವರ ಕ್ರಮದಲ್ಲಿ ಊರಿಗೆ ಸಂಬಂಧಿಸಿದ ನೆನಪೊಂದನ್ನು ಸಾಧ್ಯವಾದಷ್ಟೂ ಹೆಚ್ಚು ಕಾಲ ಮೆಲುಕು ಹಾಕುವ ಚಡಪಡಿಕೆ ಗೋಚರಿಸಿಬಿಡುತ್ತಿತ್ತು. ಎಂದೋ ತಂದ ಕಳಲೆ ಉಪ್ಪಿನಕಾಯಿಯನ್ನು ಮನೆತನದ ಆಸ್ತಿಯೋ ಎಂಬಂತೆ ಫ್ರಿಜ್ಜಿನಾಳದಲ್ಲಿ ಹುದುಗಿಸಿಟ್ಟು, ಅದರ ಒಂದೊಂದೇ ಹೋಳುಗಳನ್ನು ಊಟಕ್ಕೆ ಬಡಿಸುವ ಅಮ್ಮನ ಜೋಪಾನದಲ್ಲಿಯೂ ಅಂಥದೇ ಸಾಹಸವಿತ್ತು. ಬಡಾವಣೆಗೊಂದರಂತೆ ತಲೆ ಎತ್ತಿದ್ದ ಮಂಗಳೂರು ಸ್ಟೋರ್ಸುಗಳಿಗೆ ಹೋದಾಗ, ಅಲ್ಲಿ ಜೋಡಿಸಿಟ್ಟ ಹಲಸಿನ ಬಡಕು, ಪತ್ರೊಡೆ, ಬಸಲೆ, ಕಳಲೆಯ ಕಟ್ಟುಗಳನ್ನು ಮುಟ್ಟಿ ಮುಟ್ಟಿ ನೋಡುವಾಗ ತನಗಾಗುವ ಅಮಾಯಕ ಪುಳಕದಲ್ಲೂ ಊರಿನೆಡೆಯ ಸೆಳೆತವೇ ಇತ್ತು.

ಅಷ್ಟೇ ಅಲ್ಲದೆ ಅದರ ಐಹಿಕ ಇರವಿಗಿಂತ, ದೂರದಲ್ಲೆಲ್ಲೋ ತನಗೆ ಸಂಬಂಧಿಸಿದ ಜಾಗೆಯೊಂದಿದೆ ಎಂಬ ಆಪ್ತ ಭಾವ ಹೆಚ್ಚು ಕಡಿಮೆ ಇಪ್ಪತ್ತು ವರ್ಷಗಳ ನಂತರವೂ ಅನಂತುವನ್ನು ಕಾಡುತ್ತಲೇ ಇತ್ತು. ನ್ಯೂಸು ಪೇಪರಿನಲ್ಲೋ ಟೀವಿಯಲ್ಲೋ ಅಚಾನಕವಾಗಿ ಊರಿನ ಹೆಸರು ಬಂದಾಗಲೆಲ್ಲಾ ಅವನಿಗೆ ಸಂಕಟ ಮತ್ತು ಸಂತೋಷಗಳ ನಡುವಿನದ್ದೇನೋ ಆಗುತ್ತಿತ್ತು. ಕೆಲವೊಮ್ಮೆ ಅನಿರೀಕ್ಷಿತವಾಗಿ ತನ್ನೂರಿಗೆ ಹೋಗುವ ಬಸ್ಸುಗಳು ಎದುರಾದಾಗೆಲ್ಲ ಏಕಾಏಕಿ ಏನೋ ಉಮ್ಮಳಿಸಿದಂತಾಗುತ್ತಿದ್ದು ಅವನಿಗೆ. ಅಜ್ಜಿ ಆಗಾಗ ಹೇಳುತ್ತಿದ್ದ 'ನಾವು ಇದ್ದೂರೇ ನಮ್ಮೂರು' ಎಂಬ ಮಾತಿನಲ್ಲಿ ಎಷ್ಟು ಪ್ರಯತ್ನಿಸಿದರೂ ಅನಂತುವಿಗೆ ನಂಬಿಕೆ ಬಂದಿರಲಿಲ್ಲ. ಇದೇ ನಮ್ಮೂರಾದರೆ, ಆ ಊರು ನನಗೆ ಏನಾಗಬೇಕು? ಎಂಬ ಪ್ರಶ್ನೆಯಷ್ಟೇ ತೀವ್ರವಾಗಿ 'ಅಲ್ಲಿ ಹುಟ್ಟಿ ಸ್ವಲ್ಪ ಕಾಲ ಬೆಳದ ಮಾತ್ರಕ್ಕೆ ಅದು ನನ್ನೂರಾಗುವುದಾದರೆ, ಬದುಕು ಕೊಟ್ಟ ಈ ಊರಿನದ್ದು ಅದಕ್ಕೂ ಮೀರಿದ ನಂಟಲ್ಲವೇ? ಎಂಬ ಪ್ರಶ್ನೆಯೂ ಕಾಡುತ್ತಿತ್ತು. ಕೆಲವೊಮ್ಮೆ ಊರಿಗೆ ಸಂಬಂಧಿಸಿದ್ದು ಏನೋ ನೆನಪಾದಾಗ, ಆ ನೆನಪು ನಿಜಕ್ಕೂ ಅಲ್ಲಿಗೇ ಸಂಬಂಧಿಸಿದ್ದೋ, ಅಥವಾ ಆ ಊರಿನ ವ್ಯಕ್ತಿತ್ವಕ್ಕೆ ತನಗೆ ತೋಚಿದ್ದನ್ನೆಲ್ಲ ಆರೋಪಿಸಿಬಿಡುವ ತನ್ನ ಖಯಾಲಿಯಿಂದಾಗಿ ಸುಮ್ಮನೇ ಹಾಗೆನಿಸುತ್ತಿದೆಯೋ ಎಂದು ಸೋಜಿಗವೂ ಆಗುತ್ತಿತ್ತು. ಒಟ್ಟಿನಲ್ಲಿ ಅನಂತುವಿನ ಊರು ಅವನೊಳಗೆ ಜೀವಂತವಾಗಿತ್ತು.

ಮುಂಜಾವಿನ ಆರು ಗಂಟೆಗೆಲ್ಲ ಎದ್ದು ಬಿಡುವ ಅನಂತು, ಆರೂ ಮುಕ್ಕಾಲರವರೆಗೂ ಸುಮ್ಮನೇ ಬಿದ್ದುಕೊಂಡಿರುತ್ತಾನೆ. ಬೂದು ಬೂದು ಕತ್ತಲಿನಲ್ಲಿ, ಎಲ್ಲ ಮೌನವಾಗಿರುತ್ತದೆ, ಮಳೆಯಿದ್ದರೆ ಪಕ್ಕದ ತಾರಸಿಯಿಂದ ಒಂದೇ ಲಯದಲ್ಲಿ ಕೆಳಗೆ ಧುಮುಕುವ ನೀರಿನ ಸದ್ದು ಕೇಳುತ್ತಿರುತ್ತದೆ, ಇಲ್ಲವಾದರೆ ನಿರಾಳವಾದ